# ಕಣ್ಸೆಳೆಯುವ ಕಿಸ್ಕಾರ!





ಗುಡ್ಡಗಾಡಿನಲ್ಲಿ ನಾಲ್ಕೆಸಳಿನ ಅಚ್ಚಕೆಂಪು ಬಣ್ಣದ ಸುಂದರ ಹೂವು ನಗುತ್ತಿರುವುದು ನೋಡಿದ್ದೀರಾ? ಇದೇ ಹೂವಿನ ಇನ್ನೊಂದು ವಿಧ ಮನೆಯಂಗಳದಲ್ಲೂ ಗೊಂಚಲು ಗೊಂಚಲಾಗಿ ಹೂವು ಬಿಡುತ್ತದೆ. ಈ ಹೂವಿನ ಹೆಸರೇ ಕಿಸ್ಕಾರ. ಇದಕ್ಕೆ ಹೊಳೆ ದಾಸವಾಳ, ಕೇಪಲ, ಕೇಪುಳೆ, ಕುಸುಮ ಮಾಲೆ ಮುಂತಾದ ಹೆಸರುಗಳೂ ಇವೆ.

ಕಿಸ್ಕಾರ ಹೂವಿನ ವೈಜ್ಞಾನಿಕ ಹೆಸರು ಇಕ್ಸೋರಾ ಕಾಕ್ಸಿನಿಯಾ. ಇದು ರುಬಿಯಾಸೀಸೆ ಎಂಬ ಸಸ್ಯ ಕುಟುಂಬಕ್ಕೆ ಸೇರಿದೆ. ಇದಕ್ಕೆ ಜಂಗಲ್ ಫ್ಲಮ್ ಎಂಬ ಹೆಸರೂ ಇದೆ. ಕನ್ನಡದಲ್ಲಿ ಕೇಪುಳ, ಸಂಸ್ಕೃತದಲ್ಲಿ ಪಾತಲಿ, ಬಂಧು ಜೀವಕ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಇದರ ಗಿಡ ಪೊದರಿನಂತೆ ನೆಲದಿಂದ ಸುಮಾರು ಮೂರು ಅಡಿ ಎತ್ತರ ಬೆಳೆಯುತ್ತದೆ.

ಗುಡ್ಡ ಕಿಸ್ಕಾರ ಅಚ್ಚಕೆಂಪು ಬಣ್ಣ, ಕೆಲವು ಬಿಳಿ ಬಣ್ಣದಿಂದಲೂ ಕೂಡಿರುತ್ತದೆ. ಆದರೆ ಸುವಾಸನೆ ಇಲ್ಲ. ಮನೆಯಂಗಳದಲ್ಲಿ ಅಲಂಕಾರಕ್ಕಾಗಿ ಬೆಳೆಯುವ ಕಿಸ್ಕಾರ ಗಿಡದಲ್ಲಿ ಕೇಸರಿ ಬಣ್ಣದ ಹೂವು ಬಿಡುತ್ತದೆ. ಗೊಂಚಲು ಗೊಂಚಲಾಗಿ ಚೆಂಡಿನಂತೆ ಬಿಡುವ ಹೂಗಳು ಗಿಡ ತುಂಬ ಬಿಟ್ಟಾಗ ನೋಡಲು ಬಹಳ ಸೊಗಸಾಗಿರುತ್ತದೆ. ಹಣ್ಣು ಸಹ ಕೆಂಪಗಿದ್ದು, ಸವಿಯಲು ಯೋಗ್ಯವಾಗಿರುತ್ತದೆ. ದೇವರ ಪೂಜೆಗೆ ಶ್ರೇಷ್ಠ ಹೂವು ಇದು. ಹೀಗಾಗಿ ವರ್ಷಪೂರ್ತಿ ಪೂಜೆಗೆ ಹೂವು ಸಿಗುತ್ತದೆ. ಸಾಮಾನ್ಯವಾಗಿ ಸತ್ಯನಾರಾಯಣ ಪೂಜೆಗಳಲ್ಲಿ ಈ ಹೂವುಗಳನ್ನು ಕಡ್ಡಾಯವಾಗಿ ಬಳಸುತ್ತಾರೆ. ಹೂಕುಂಡಗಳಲ್ಲಿಯೂ ಕಿಸ್ಕಾರ ಗಿಡ ಬೆಳೆಸಿ ಯಥೇಚ್ಛ ಹೂವು ಪಡೆಯಬಹುದು.

ಗುಡ್ಡದಲ್ಲಿ ಸಿಗುವ ಕಿಸ್ಕಾರ ಹೆಚ್ಚಿನ ಔಷಧೀಯ ಗುಣಗಳನ್ನು ಹೊಂದಿದೆ. ಇದರ ತಂಬುಳಿ ಬಹಳ ರುಚಿಕರ. ಬೇಸಿಗೆಯಲ್ಲಿ ತಂಬುಳಿ ಮಾಡಿ ಊಟ ಮಾಡಿದರೆ ಅಥವಾ ಹಾಗೆಯೇ ಕುಡಿದರೂ ಇದು ಮಲಬದ್ಧತೆ ನಿವಾರಿಸುತ್ತದೆ.

ಗಿಡದ ಬೇರನ್ನು ಹಾಲಿನಲ್ಲಿ ತೇದು ತುರಿಕೆ ಇರುವ ಜಾಗಕ್ಕೆ ಹಚ್ಚಿದರೆ ಚರ್ಮದ ಕಡಿತ ನಿವಾರಣೆಯಾಗುತ್ತದೆ. ಚಿಕ್ಕ ಮಕ್ಕಳಲ್ಲಿ ಕೈಕಾಲುಗಳಲ್ಲಿ ಹುಣ್ಣುಗಳಾಗಿದ್ದರೆ ಈ ಗಿಡದ ಬೇರನ್ನು ಎಣ್ಣೆಯಲ್ಲಿ ಹಾಕಿ ಕಾಯಿಸಿ ಶೋಧಿಸಿ ಹಚ್ಚಿದರೆ ಗುಣವಾಗುತ್ತದೆ.

■ ಸುಮನಾ ಜಿ. ಪ್ರಸಾದ್

## ಔಷಧೀಯ ಗುಣ

- ಮಧುಮೇಹ ದಿಂದ ಬಳಲುತ್ತಿರುವವರು ಕಿಸ್ಕಾರ ಎಲೆಯಿಂದ ತಯಾರಿಸಿದ ಕಷಾಯ ಕುಡಿದರೆ ರಕ್ತದಲ್ಲಿರುವ ಸಕ್ಕರೆ ಅಂಶವನ್ನು ನಿಯಂತ್ರಣದಲ್ಲಿ ಇರಿಸಬಹುದು.
- ಕೇಪುಳದ ಹೂವು ಒಗರು ರುಚಿಯನ್ನು ಹೊಂದಿದ್ದು, ಮತ್ತು ಚಿಗುರನ್ನು ನಾಲ್ಕು ಕಾಳು ಜೀರಿಗೆಯೊಂದಿಗೆ ಜಜ್ಜಿ ರಸ ತೆಗೆದು ಸೋಸಿ, ಒಂದು ಚಮಚದಷ್ಟು ಕುಡಿಸಬೇಕು.
- ಕೆಂಪನೆಯ ಹೂವು, ನಾಲ್ಕೇ ನಾಲ್ಕು ಎಸಳು (ಕೆಲವು ಹೂವುಗಳಲ್ಲಿ ಐದು ಎಸಳುಗಳಿರುತ್ತವೆ) ಸುವಾಸನೆಯಿಲ್ಲದ ಹೂವು ಆದರೂ ನೋಡಲು ಆಕರ್ಷಕ. ರುಚಿಯಲ್ಲಿ ಒಗರು, ಹೂವುಗಳಿಂದ ಚಟ್ನಿ, ತಂಬುಳಿ, ಸಾರು ಮಾಡಿ ಸವಿಯಬಹುದು.

ಓಂ + ☪ ಸರ್ವೇಜನಃ ಸುಖಿನೋ ಭವಂತುಃ ಓಂ + ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.